ಪ್ರೇರೇಪಿತರಾಗಿ ಎಷ್ಟೋ ಜನ ನಮ್ಮ ಬಳಿಕೆ ಬಂದಿದ್ದಾರೆ' ಎಂದು ಆಕೃತಿ ತಮ್ಮ ಗ್ರಾಹಕರ ಜಾಯಮಾನವನ್ನು ಹೇಳಿಕೊಂಡರು.

ಅವರ ಏಜೆನ್ಸಿಯ ಶಾಖೆಗಳ ಪೈಕಿ ಬೆಂಗಳೂರಿನಲ್ಲೇ ಹೆಚ್ಚು ಪ್ರಕರಣಗಳು ಬರುತ್ತಿವೆ. ದಿನಕ್ಕೆ ಸರಾಸರಿ ಮೂರ್ನಾಲ್ಕು ಗ್ರಾಹಕರು ಈ ಮಹಾನಗರಿಯಲ್ಲಿ ಅವರಿಗೆ ಸಿಗುತ್ತಿದ್ದಾರೆ. ದೆಹಲಿ, ಪುಣೆ ನಂತರದ ಸ್ಥಾನದಲ್ಲಿವೆ. ಹೈದರಾಬಾದ್ ದೂರುಗಳು ಹೆಚ್ಚಾಗಿ ಬರುತ್ತಿರುವ ನಾಲ್ಕನೆಯ ನಗರಿ.

ಬೆಂಗಳೂರಿನಲ್ಲಿ ಸಂಬಂಧಗಳ ಕುರಿತ ಅನುಮಾನದ ಕೇಸುಗಳೇ ಹೆಚ್ಚಾಗಿ ಅವರಿಗೆ ಸಿಗುತ್ತಿವೆ. ಗಂಡನಿಗೆ ಹೆಂಡತಿ ಇನ್ನೊಂದು ಸಂಬಂಧ ಇಟ್ಟುಕೊಂಡಿರುವ ಅನುಮಾನ ಇರುವುದೋ ಅಥವಾ ಇದು ಉಲ್ಟಾ ಆಗಿರುವುದೋ ಪ್ರಕರಣಗಳು ಹೆಚ್ಚಾಗಿ ಬರುತ್ತವೆ. ಮದುವೆಗೆ ನಿಶ್ಚಯಿಸುವ ಮೊದಲು ವರ ಅಥವಾ ವಧುವಿನ ಪೂರ್ವಾಪರ ಪತ್ತೆಹಚ್ಚುವಂತೆ ಕೇಳಿಕೊಂಡು ಬರುವವರೂ ವ್ಯಾಪಕವಾಗಿದ್ದಾರೆ. ಅದರಲ್ಲೂ ವಿದೇಶದಲ್ಲಿ ನೆಲೆಗೊಂಡ ವರ ಇದ್ದರೆ ಅವನ ಚಲನವಲನಗಳು, ಆಸಕ್ತಿಗಳು, ಸಾಚಾತನವನ್ನು ತಿಳಿದುಕೊಂಡೇ ಮದುವೆ ಮಾಡಲು ಬಹುತೇಕ ಹಿರಿಯರು ಏಜೆನ್ಸಿಗೆ ಎಡತಾಕುತ್ತಾರೆ. ಬೆಂಗಳೂರಿನಲ್ಲಿ ಈ ಎರಡೂ ರೀತಿಯ ಪ್ರಕರಣಗಳನ್ನು ವೀನಸ್ ಏಜೆನ್ಸಿ ಹೆಚ್ಚಾಗಿ ಕಂಡಿದೆ.

ಹೈದರಾಬಾದ್‌ನಲ್ಲಿ ವಂಚನೆ ಪ್ರಕರಣಗಳನ್ನು ಪತ್ತೆಹಚ್ಚುವಂತೆ ಕೋರಿ ಬರುವವರ ಸಂಖ್ಯೆ ಹೆಚ್ಚು. ಇವಲ್ಲದೆ ಕೆಲವು ಕಂಪನಿಗಳು ಸಿಬ್ಬಂದಿ ಮಾಹಿತಿ ಸೋರಿಕೆ ಮಾಡುತ್ತಿರುವರೇ, ಅವ್ಯವಹಾರದಲ್ಲಿ ಭಾಗಿಯಾಗಿದ್ದಾರೆಯೇ ಎಂದು ತಿಳಿಯಲು ಕೂಡ ತಮ್ಮಂಥ ಪತ್ತೆದಾರಿ ಏಜೆನ್ಸಿಗಳಿಗೆ ಬರುತ್ತಾರೆ ಎಂದು ದೂರುಗಳ ಸ್ವರೂಪದ ಮೇಲೆ ಬೆಳಕು ಚೆಲ್ಲಿದರು.

ತಮ್ಮ ಬಳಿಗೆ ಪ್ರಕರಣಗಳನ್ನು ತರುವವರು ಇಂಥದ್ದೇ ಆರ್ಥಿಕವರ್ಗಕ್ಕೆ ಸೇರಿದವರು ಎಂದು ಹೇಳಲು ಸಾಧ್ಯವಿಲ್ಲ ಎನ್ನುವ ಆಕೃತಿ, ನಗರ ನಾಗರಿಕತೆಯಲ್ಲಿ ಸಂಬಂಧಗಳ ಬಗೆಗಿನ ಅನುಮಾನಗಳು ದಟ್ಟವಾಗುತ್ತಿರುವುದಕ್ಕೆ ತಮ್ಮ ಬಳಿ ಬರುವ ಪ್ರಕರಣಗಳೇ ಸಾಕ್ಷಿ ಎನ್ನುತ್ತಾರೆ.

ಆಕೃತಿ ತಮ್ಮ ಏಜೆನ್ಸಿಯಲ್ಲಿ ಕಾಲೇಜು ವಿದ್ಯಾರ್ಥಿನಿಯರ ಕಲಿಕೆಯೂ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಎಷ್ಟೊ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಅವರಲ್ಲಿ 'ಇಂಟರ್ನ್‌ಷಿಪ್' ಮಾಡಿದ್ದಾರೆ. ಪತ್ರಿಕೋದ್ಯಮ ವಿದ್ಯಾರ್ಥಿಗಳೂ ಮಾಹಿತಿ ಸಂಗ್ರಹಿಸುವ ಕ್ರಮವನ್ನು ಅರಿತುಕೊಳ್ಳಲು ಅವರ ಏಜೆನ್ಸಿಯಲ್ಲಿ ಅರೆಕಾಲಿಕ ಕೆಲಸ ಮಾಡುತ್ತಾರೆ. ಪ್ರಕರಣಗಳಿಗೆ ಅನುಗುಣವಾಗಿ ಗೃಹಿಣಿಯರನ್ನೂ ಆಕೃತಿ ಅವರ ಏಜೆನ್ಸಿ ಬಳಸಿಕೊಳ್ಳುತ್ತದೆ. ನೆರೆಯವರಿಂದ ಮಾಹಿತಿ ಪಡೆಯುವಾಗ ಅನುಮಾನ ಬಾರದೇ ಇರಲಿ ಎಂದು ಇಂಥವರನ್ನು ನೆಚ್ಚಿಕೊಳ್ಳುವುದು ಅವರಿಗೆ ಅನಿವಾರ್ಯ. ■





ವ್ಯವಸ್ಥಿತ ಅಧ್ಯಯನವೇನೂ ಆಗಿಲ್ಲ. ಆದರೆ, ಕುಂವರ್ ವಿಕ್ರಮ್ ಸಿಂಗ್ ಅವರೇ ಹೇಳಿರುವಂತೆ, 12 ಸಾವಿರದಿಂದ 15 ಸಾವಿರ ಜನ ಖಾಸಗಿ ಪತ್ತೆದಾರಿ ಏಜೆನ್ಸಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

### ವಿಸ್ತರಿಸಿದ ಮಾರುಕಟ್ಟೆ

ಭಾರತದಲ್ಲಿ ಖಾಸಗಿ ಪತ್ತೆದಾರರ ಮಾರುಕಟ್ಟೆಯಂತೂ ವಿಸ್ತರಿಸುತ್ತಾ ಹೋಗುತ್ತಿದೆ. 2017ರ ಅಕ್ಟೋಬರ್‌ನಲ್ಲಿ ನವದೆಹಲಿಯಲ್ಲಿ 'ಡಬ್ಲ್ಯುಎಡಿ' ಪತ್ತೆದಾರರ ಸಮಾವೇಶವೊಂದನ್ನು ನಡೆಸಿತ್ತು. 50ಕ್ಕೂ ಹೆಚ್ಚು ದೇಶಗಳ 150ಕ್ಕೂ ಅಧಿಕ ಪತ್ತೆದಾರರು ಅದರಲ್ಲಿ ಭಾಗವಹಿಸಿದ್ದರು. 2020ರ ಹೊತ್ತಿಗೆ ಭಾರತದಲ್ಲಿ ಪತ್ತೆದಾರಿ ಏಜೆನ್ಸಿಗಳ ಒಟ್ಟು ವಾರ್ಷಿಕ ವಹಿವಾಟು 1,700 ಕೋಟಿ ರೂಪಾಯಿ ಮುಟ್ಟಲಿದೆ ಎಂದು ಆಗ ಅಂದಾಜು ಮಾಡಲಾಗಿತ್ತು. ದೇಶ ಆರ್ಥಿಕ ಸಂಕಷ್ಟದಲ್ಲಿರುವ ಕಾಲಘಟ್ಟದಲ್ಲಿ ಪ್ರತಿವರ್ಷ ಶೇ 30ರಷ್ಟು ಆದಾಯ ಹೆಚ್ಚಿಸಿಕೊಳ್ಳುತ್ತಿರುವ ಈ ಕ್ಷೇತ್ರ ಆಸಕ್ತಿಕರವಂತೂ ಹೌದು. ಅಂದಹಾಗೆ, 2017ರಲ್ಲಿ 500–600 ಕೋಟಿ ರೂಪಾಯಿಯಷ್ಟು ವಹಿವಾಟು ಮಾತ್ರ ಈ ಕ್ಷೇತ್ರದಲ್ಲಿ ಇತ್ತು.

ಪತ್ತೆದಾರರಾಗಲು ಇದಮಿತ್ಥಂ ಎನ್ನುವ ಯಾವ ಕೋರ್ಸ್ ಕೂಡ ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಇಲ್ಲ. ಸ್ವಯಂ ಆಸಕ್ತಿಯಿಂದ ಇದರ ಸೂಕ್ಷ್ಮಗಳನ್ನು ಕಲಿಯಬೇಕಷ್ಟೆ. ಖಾಸಗಿ ಪತ್ತೆದಾರಿ ಏಜೆನ್ಸಿಗಳಿಗೆ ಇಂಟರ್ನಿಗಳಾಗಿ ಸೇರಿ, ಕಾರ್ಯವೈಖರಿಯಲ್ಲಿ